# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಕ್ಷಿಣ ವಲಯ

### ಪಟ್ಟಾಭಿರಾಮನಗರ , ವಾರ್ಡ ಸಂಖ್ಯೆ: 168

**ದಿನಾಂಕ:30.04.2022 ರಂದು ವಾರ್ಡ ಸಂಖ್ಯೆ 168 ಪಟ್ಟಾಭಿರಾಮ ನಗರ ವಾರ್ಡನಲ್ಲಿ ನಡೆದ ವಾರ್ಡ ಸಮಿತಿ ಸಭೆ:**

### –: ಸಮಿತಿ ಸಭೆಯ ನಡವಳಿಗಳು :–

ವಾರ್ಡ ಸಮಿತಿ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು ಮತ್ತು ವಾರ್ಡ 168 ಸಾರ್ವಜನಿಕರು

| ಕ್ರಮ ಸಂಖ್ಯೆ | ಹೆಸರು | ಹುದ್ದೆ |
|---|---|---|
| 01 | ಶ್ರೀ ಜಗದೀಶ್. ಕೆ ನಾಯ್ಕ | ಮಾನ್ಯ ಜಂಟಿ ಅಯ್ಯುಕರು (ದಕ್ಷಿಣ), ಬಿ.ಬಿ.ಎಂ.ಪಿ ಹಾಗೂ ಅಧ್ಯಕ್ಷರು ವಾರ್ಡ–168 ರ ಸಮಿತಿ ಸಭೆ ಮತ್ತು ನೋಡಲ್ ಅಧಿಕಾರಿಗಳು |
| 02 | ಶ್ರೀ ಚಂದ್ರಶೇಖರ್. ವಿ | ಕಾರ್ಯಾದರ್ಶಿ ಮತ್ತು ಸಂಚಾಲಕರು ವಾರ್ಡ–168 |
| 03 | ಶ್ರೀ ಪ್ರವೀಣ ಶೆಟ್ಟಿ | PSI , ಜಯನಗರ ಪೋಲಿಸ್ ಠಾಣೆ |
| 04 | ಶ್ರೀ ಅರುಮೂಗನ್ | ಕಂದಾಯ ನಿರೀಕ್ಷರು, ಜಯನಗರ |
| 05 | ಶ್ರೀ ಬಸಪ್ಪ | ಕಂದಾಯ ನಿರೀಕ್ಷರು, ಜಯನಗರ |
| 06 | ಶ್ರೀ ರಾಮಚಂದ್ರ . ಸಿ | ಕಿರಿಯ ಆರೋಗ್ಯ ನಿರೀಕ್ಷಕರು, ಬಿ.ಬಿ.ಎಂ.ಪಿ |
| 07 | ಶ್ರೀಮತಿ ಶ್ರೀಜಾ . ಎಸ್ | ಸ.ಅ, BWSSB ಜಯನಗರ |
| 08 | ಶ್ರೀ ಮಂಜುನಾಥ. ಎ.ಸಿ | ಕಿರಿಯ ಆರೋಗ್ಯ ನಿರೀಕ್ಷಕರು, ಬಿ.ಬಿ.ಎಂ.ಪಿ |
| 09 | ಶ್ರೀ ಸಜ್ಜಪ್ಪ | Sup. ಬಿ.ಬಿ.ಎಂ.ಪಿ |
| 10 | ಶ್ರೀ ನಾಗರಾಜು . ಎಸ್ | Sup. ಬಿ.ಬಿ.ಎಂ.ಪಿ |
| 11 | ಶ್ರೀ ಬಸವ | SD. ಬಿ.ಬಿ.ಎಂ.ಪಿ |
| 12 | ಶ್ರೀಮತಿ ಲತಾ .ಸಿ.ಎನ್ | PHCO ಬಿ.ಬಿ.ಎಂ.ಪಿ |
| 13 | ಶ್ರೀ ಪ್ರಕಾಶ್ . ಕೆ | J.E , BECOM ಜಯನಗರ |
| 14 | ವಾರ್ಡ 168 ರ ಸ್ಥಳಿಯ ನಿವಾಸಿಗಳ ಸಂಘ ಮತ್ತು ನಾಗರೀಕರು | |

ವಾರ್ಡ ಸಮಿತಿ ಅದ್ಯಕ್ಷರು ಸಭೆಗೆ ಹಾಜರಿದ್ದ ಎಲ್ಲಾ ಸಾರ್ವಜನಿಕರಿಗೆ ಮತ್ತು ಅಧಿಕಾರಿ ವರ್ಗದವರಿಗೆ ಸ್ವಾಗತ ಕೋರುತ್ತಾ , ಸಭೆಯನ್ನು ಪ್ರಾರಂಭಿಸಿದರು.

1. ಮಾನ್ಯ ನೋಡಲ್ ಅಧಿಕಾರಿಗಳು ಮಾತನಾಡುತ್ತಾ 16.04.2022 ರಂದು ತಿಳಿಸಿದ ಸಾರ್ವಜನಿಕರು ಮತ್ತು ನೌಕರರು ತಿಳಿಸಿದ ಸಮಸ್ಯೆಗಳ ಬಗ್ಗೆ ಮಾಹಿತಿ ಪಡೆದುಕೊಂಡರು.

2. ಅಧ್ಯಕ್ಷರು ವಾರ್ಡ ಸಂಖ್ಯೆ 168 ರಲ್ಲಿನ ಕಸದ ವಿಂಗಡನೆ ಬಗ್ಗೆ ಅಧ್ಯಕ್ಷರು ಮಾಹಿತಿ ಪಡೆದುಕೊಡರು ಹಾಗೂ ಸಾರ್ವಜನಿಕರಿಗೆ ಕಸದ ವಿಂಗಡನೆ ಬಗ್ಗೆ ಅರಿವು ಮೂಡಿಸಬೇಕು ಮತ್ತು ಕಸದ ವಿಂಗಡನೆಯು ಪ್ರಸುತ್ತ 52% ಇದ್ದು, ಕಸದ ವಿಂಗಡನೆ ಪ್ರಮಾಣದಲ್ಲಿ ಹೆಚ್ಚಿನ ಶೇಕಡವಾರು ಸಾಧಿಸಲು ಸಭೆಯಲ್ಲಿ ತಿಳಿಸಿದರು **(ಕ್ರಮ: ಸ.ಕಾ.ನಿ.ಅ, SWM, ಜಯನಗರ)**

3. ವಾರ್ಡ 168 ರ ವ್ಯಾಪ್ತಿಯಲ್ಲಿರುವ Black spot ಗಳ ಬಗ್ಗೆ ಅಧ್ಯಕ್ಷರು ಮಾಹಿತಿ ಪಡೆದುಕೊಡರು ಹಾಗೂ ವಾರ್ಡ ವ್ಯಾಪ್ತಿಯಲ್ಲಿಯಲ್ಲಿ Black spot ಗಳು ನಿರ್ಮಾಣವಾಗದೆ ಹಾಗೆ ಕ್ರಮ ವಹಿಸಲು ಸಭೆಯಲ್ಲಿ ತಿಳಿಸಿದರು. **(ಕ್ರಮ: ಸ.ಕಾ.ನಿ.ಅ, SWM, ಜಯನಗರ)**

4. ವಾರ್ಡ ಸಂಖ್ಯೆ 168ರ ರಲ್ಲಿರುವ ಮಾರೇನಹಳ್ಳಿ ಟ್ಯಾಂಕ್‌ಬಂಡ್ (SWD) ಪಕ್ಕದಲ್ಲಿರುವ ಪ್ರದೇಶದಲ್ಲಿ ಸೊಳ್ಳೆಗಳು ತುಂಬಾ ಹೆಚ್ಚಾಗಿದ್ದು , ಸೊಳ್ಳೆಗಳನ್ನು ನಿಯಂತ್ರಿಸಲು ಸೊಳ್ಳೆ ಔಷದಿಯನ್ನು ಸಿಂಪಡಿಸಲು ಸಭೆಯಲ್ಲಿ ಕೋರಿದರು. **(ಕ್ರಮ: ಆರೋಗ್ಯಾಧಿಕಾರಿಗಳು, ಬಿ.ಬಿ.ಎಂ.ಪಿ ಜಯನಗರ)**

5. ವಾರ್ಡ 168 ರ 18ನೇ ಮುಖ್ಯರಸ್ತೆ ನಲ್ಲಿರುವ ಮರದ ಉದ್ದವಾಗಿರುವ ಕೊಂಬೆಗಳು ಬೀಳುವ ಸ್ಥಿತಿಯಲ್ಲಿದ್ದು. ಸದರಿ ರಸ್ತೆಗಳಲ್ಲಿರುವ ಮರದ ಕೊಂಬೆಗಳನ್ನು ಕತ್ತರಿಸುವಂತೆ ಸಭೆಯಲ್ಲಿ ಕೋರಿದರು. **(ಅರಣ್ಯ ಇಲಾಖೆ (ದಕ್ಷಿಣ) ಬಿ.ಬಿ.ಎಂ.ಪಿ ಜಯನಗರ)**

6. ಈ ದಿನಮಾನಗಳಲ್ಲಿ ಸುರಿಯುತ್ತಿರುವ ಅಕಾಲಿಕ ಮಳೆಯಿಂದಾಗಿ ತಗ್ಗು ಪ್ರದೇಶಗಳಲ್ಲಿ ನೀರು ತುಂಬಿಕೊಳ್ಳತ್ತಿದ್ದು ಹಾಗೂ ಚರಂಡಿಗಳಲ್ಲಿ ಮಳೆನೀರು ಸರಗವಾಗಿ ಹರಿಯದೆ ರಸ್ತೆಗಳಲ್ಲಿ ಮಳೆನೀರು ನಿಂತುಕೊಂಡು ಸಾರ್ವಜನಿಕರಿಗೆ ಮತ್ತು ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿರುತ್ತದೆ. ಇದರ ಬಗ್ಗೆ ಕ್ರಮ ವಹಿಸಲು ಅಧ್ಯಕ್ಷರು ಸಭೆಯಲ್ಲಿ ತಿಳಿಸಿದರು. **(ಕ್ರಮ: ಕಿ.ಅ, ವಾಡ್‌-168 ಬಿ.ಬಿ.ಎಂ.ಪಿ)**

ಕೊನೆಯದಾಗಿ ಅಧ್ಯಕ್ಷರು ಸಭೆಗೆ ಹಾಜರಾದ ಎಲ್ಲಾ ಸಾರ್ವಜನಿಕರಿಗೆ ಮತ್ತು ಅಧಿಕಾರಿಗಳಿಗೆ ವಂದನೆಯನ್ನು ತಿಳಿಸುತ್ತಾ, ಇಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕೈಗೊಂಡಿರುವ ಕ್ರಮಗಳ ಬಗ್ಗೆ ಮುಂದಿನ ಸಭೆಯಲ್ಲಿ ಪೂರ್ಣ ಮಾಹಿತಿಯನ್ನು ಒದಗಿಸಬೇಕೆಂದು ಇಲಾಖಾ ಅಧಿಕಾರಿಗಳಿಗೆ ತಿಳಿಸುತ್ತಾ, ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

Next date of meeting will be on 20/05/2022

(ಶ್ರೀ ಜಗದೀಶ್ ಕೆ ನಾಯ್ಕ )
ಮಾನ್ಯ ಜಂಟಿ ಆಯುಕ್ತರು (ದಕ್ಷಿಣ),
ಹಾಗೂ ಅಧ್ಯಕ್ಷರು ವಾರ್ಡ-168 ರ ಸಮಿತಿ ಸಭೆ
ಮತ್ತು ನೋಡಲ್ ಅಧಿಕಾರಿಗಳು